**ಭಾರತದ ಸರ್ವೋಚ್ಚ ನ್ಯಾಯಾಲಯ**

**ಸನ್ಮಾನ್ಯ ನ್ಯಾಯಮೂರ್ತಿ ಎ.ಎಂ. ಕಾನ್ವಿಲಕರ್**
**ಹಾಗೂ**
**ಸನ್ಮಾನ್ಯ ನ್ಯಾಯಮೂರ್ತಿ ಅಜೆಯ್ ರಸ್ತೋಗಿ**

**ಅಸಿಮ್ ಶರೀಫ್ – ವಿರುದ್ಧ – ರಾಷ್ಟ್ರೀಯ ತನಿಖಾ ಏಜೆನ್ಸಿ***

**ಕ್ರಿಮಿನಲ್ ಅಪೀಲು ಸಂಖ್ಯೆ: 949/2019 ದಿನಾಂಕ: 1ನೇ ಜುಲೈ 2019**
**(2019ರ ಎಸ್‌ಎಲ್‌ಪಿ (ಕ್ರಿಮಿನಲ್) ಸಂಖ್ಯೆ: 1253 ಯಿಂದ ಉದ್ಭವಿಸಿರುತ್ತದೆ)**

**ತೀರ್ಪು**

**ನ್ಯಾಯಮೂರ್ತಿ ರಸ್ತೋಗಿ:**

1. ಅನುಮತಿ ನೀಡಲಾಗಿದೆ.

2. ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 120–ಬಿ, 109, 150, 153ಎ, 302, 201ನೇ ಪ್ರಕರಣಗಳ, ಆಯುಧ ಅಧಿನಿಯಮದ 3 ಹಾಗೂ 27ನೇ ಪ್ರಕರಣಗಳ ಹಾಗೂ ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (ಇಲ್ಲಿ ಇನ್ನು ಮುಂದೆ "ಯುಎಪಿ ಅಧಿನಿಯಮ" ಎಂದು ಉಲ್ಲೇಖಿಸಲಾಗುವುದು)ರ 15, 16, 17, 18 ಹಾಗೂ 20ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾಗಿರುವ ಅಪರಾಧಗಳಿಗಾಗಿ, ನಾಲ್ಕು ಇತರ ಆಪಾದಿತ ವ್ಯಕ್ತಿಗಳೊಂದಿಗೆ ಯಾರ ವಿರುದ್ಧ ಸಂಖ್ಯೆ: ಆರ್‌ಸಿ 04/16–ಎನ್‌ಐಎ – ಎಚ್‌ವೈಡಿ ಸಂಖ್ಯೆಯನ್ನು ಹೊಂದಿರುವ ಕ್ರಿಮಿನಲ್ ಪ್ರಕರಣ ನೋಂದಾಯಿಸಲಾಗಿತ್ತೋ, ಆ ಆಪಾದಿತ ಅಪೀಲುದಾರನು ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾನೆ.

3. ತನಿಖೆಯು ಪೂರ್ಣಗೊಂಡ ಬಳಿಕ, ಅಪೀಲುದಾರನನ್ನೂ ಒಳಗೊಂಡಂತೆ ಆಪಾದಿತ ವ್ಯಕ್ತಿಗಳ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಅಪೀಲುದಾರನು ತನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ನೋಂದಾಯಿಸುವುದಕ್ಕಾಗಲೀ, ತನಿಖೆ ನಡೆಸುವುದಕ್ಕಾಗಲೀ ಅಥವಾ ಅಂತಿಮ ವರದಿಯನ್ನು ಸಲ್ಲಿಸುವುದಕ್ಕಾಗಲೀ ಯಾವುದೇ ಸಾಕ್ಷ್ಯಗಳಿರಲಿಲ್ಲವೆಂದು ಕ್ಲೇಮು ಮಾಡಿರುತ್ತಾನೆ. ಈ ಹಂತದಲ್ಲಿ, ಅಪೀಲುದಾರನು ಈ ಹಿಂದೆ ಹೇಳಿರುವ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣದಿಂದ ತನ್ನ ಬಿಡುಗಡೆಯನ್ನು ಕೋರಿ, ದಂಡ ಪ್ರಕ್ರಿಯಾ ಸಂಹಿತೆ, 1973 (ಇಲ್ಲಿ ಇನ್ನು ಮುಂದೆ "ಸಿಆರ್‌ಪಿಸಿ" ಎಂದು ಉಲ್ಲೇಖಿಸಲಾಗುವುದು)ರ 227ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. ದಿನಾಂಕ: 22ನೇ ನವೆಂಬರ್, 2018ರ ಸ್ಪಷ್ಟವಾದ ಪ್ರಶ್ನಿತ ತೀರ್ಪಿನ ಮೂಲಕ ವಜಾಗೊಳಿಸಲಾದಂಥ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದೊಂದಿಗೆ ಓದಲಾದ ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದದಡಿಯಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ಅಪೀಲುದಾರನು, ದಿನಾಂಕ: 2ನೇ ಜನವರಿ, 2018ರ ಆದೇಶದಡಿಯಲ್ಲಿ ಈ ಹಿಂದೆ ಹೇಳಿರುವ ಅಪರಾಧಗಳಿಗೆ ಸಂಬಂಧಿಸಿದಂತೆ ಆತನ ವಿರುದ್ಧ ಆರೋಪಗಳನ್ನು ರೂಪಿಸುವಂತೆ ಅಧಿವಿಚಾರಣಾ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು ಆದೇಶಿಸಿರುವುದನ್ನು ಪ್ರಶ್ನಿಸಿದ್ದು, ಅಧಿವಿಚಾರಣಾ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು ಆ ಅರ್ಜಿಯನ್ನು ವಜಾಗೊಳಿಸಿರುತ್ತಾರೆ ಹಾಗೂ ಇದು ಪ್ರಸ್ತುತ ಅಪೀಲಿನಲ್ಲಿ ಉದ್ಭವಿಸಿರುವ ಪ್ರಶ್ನೆಯ ವಸ್ತುವಿಷಯವಾಗಿರುತ್ತದೆ.

4. ದಿನಾಂಕ: 16ನೇ ಅಕ್ಟೋಬರ್, 2016ರಂದು ಮಧ್ಯಾಹ್ನ 12.40ರ ಸುಮಾರಿಗೆ ತನ್ನ ಸ್ನೇಹಿತರಾದ ರುದ್ರೇಶ್, ಹರಿಕೃಷ್ಣ ಹಾಗೂ ಕುಮಾರ್ ಎಂಬುವವರೊಂದಿಗೆ ಶಿವಾಜಿನಗರದ ಶ್ರೀನಿವಾಸ್ ಮೆಡಿಕಲ್ ಸ್ಟೋರ್ಸ್ ಸಮೀಪದಲ್ಲಿ ಸೇರಿದಂಥ ಸಂದರ್ಭದಲ್ಲಿ, ಮೋಟಾರ್ ಸೈಕಲ್‌ನ ಹಿಂಬದಿ ಸವಾರನಾಗಿದ್ದ ಒಬ್ಬ ವ್ಯಕ್ತಿಯು (ಆಪಾದಿತ) ರುದ್ರೇಶ್‌ನನ್ನು ಒಂದು ಹರಿತವಾದ ಅಂಚುಳ್ಳ ಹಾಗೂ ಮಾರಣಾಂತಿಕವಾದ ಮಚ್ಚಿನಿಂದ ಕುತ್ತಿಗೆಯ ಬಲಪಾರ್ಶ್ವಕ್ಕೆ ಹೊಡೆದು ಓಡಿಹೋಗಿರುತ್ತಾನೆ ಹಾಗೂ ರುದ್ರೇಶ್‌ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಸ್ಪತ್ರೆಗೆ ತಲುಪುವ ಮುನ್ನವೇ

ಮೃತನಾಗಿದ್ದಾನೆಂದು ಘೋಷಿಸಲಾಗಿರುತ್ತದೆ ಎಂದು ಹೇಳಿಕೆ ನೀಡಿ, 1ನೇ ಕ್ರಿಮಿನಲ್ ಸಾಕ್ಷಿಯಾಗಿರುವ ಜಯರಾಮ್ ಎಂಬಾತನು ಒಂದು ದೂರು ಸಲ್ಲಿಸಿದ ತರುವಾಯ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸರು ದಿನಾಂಕ: 16ನೇ ಅಕ್ಟೋಬರ್ 2016ರಂದು ಅಪರಾಧ ಸಂಖ್ಯೆ: 124/2016 ಎಂದು ಕ್ರಿಮಿನಲ್ ಪ್ರಕರಣವನ್ನು ನೋಂದಾಯಿಸಿಕೊಂಡಿರುತ್ತಾರೆ ಎಂಬುದು ಈ ಅಪೀಲು ಉದ್ಭವಿಸುವುದಕ್ಕೆ ಕಾರಣವಾಗುವ ಗಣನೆಗೆ ತೆಗೆದುಕೊಳ್ಳಬೇಕಾದ, ಹಿನ್ನೆಲೆಯ ವಾಸ್ತವಾಂಶಗಳಾಗಿರುತ್ತವೆ.

5. ಪ್ರಾರಂಭದಲ್ಲಿ, ದಿನಾಂಕ: 27ನೇ ಅಕ್ಟೋಬರ್ 2016ರಂದು ನಾಲ್ಕು ಆಪಾದಿತ ವ್ಯಕ್ತಿಗಳನ್ನು (ಆಪಾದಿತ ಸಂಖ್ಯೆ:1 ರಿಂದ 4) ಬಂಧಿಸಲಾಗಿದ್ದು, ಆಪಾದಿತ ಸಂಖ್ಯೆ:5 (ಇಲ್ಲಿನ ಅಪೀಲುದಾರ) ಅನ್ನು 2ನೇ ನವೆಂಬರ್ 2016ರಂದು ಬಂಧಿಸಲಾಗಿರುತ್ತದೆ. ತರುವಾಯದಲ್ಲಿ, ಭಾರತ ಒಕ್ಕೂಟ, ಗೃಹ ಮಂತ್ರಾಲಯ, ಹೊಸ ದೆಹಲಿ ಇವರು ದಿನಾಂಕ: 7ನೇ ಡಿಸೆಂಬರ್ 2016ರಂದು ತನಿಖಾ ಕಾರ್ಯವನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ)ಗೆ ವಹಿಸಿರುತ್ತಾರೆ. ರಾಷ್ಟ್ರೀಯ ತನಿಖಾ ಏಜೆನ್ಸಿಯು ಅಪೀಲುದಾರನನ್ನು ಒಳಗೊಂಡಂತೆ ಎಲ್ಲಾ ಐವರು ಆಪಾದಿತ ವ್ಯಕ್ತಿಗಳ ವಿರುದ್ಧ ಆರ್‌ಸಿ ಸಂಖ್ಯೆ: 24/2016ರಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿರುತ್ತದೆ. ತನಿಖೆಯ ತರುವಾಯ, ಎಲ್ಲಾ ಐವರು ಆಪಾದಿತ ವ್ಯಕ್ತಿಗಳ ವಿರುದ್ಧ ದಿನಾಂಕ: 21ನೇ ಏಪ್ರಿಲ್, 2017ರಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದ್ದು, ಅದರಲ್ಲಿ ಆರ್‌ಎಸ್‌ಎಸ್ ಸದಸ್ಯರನ್ನು ಹತ್ಯೆಗೈಯುವುದಕ್ಕಾಗಿ 1 ರಿಂದ 4ನೇ ಆಪಾದಿತರು ಆಪಾದಿತ ಅಪೀಲುದಾರ (ಆಪಾದಿತ ಸಂಖ್ಯೆ:5)ನ ಜೊತೆಗೆ ಒಳಸಂಚು ನಡೆಸಿರುತ್ತಾರೆ ಹಾಗೂ ಅವರ ಕೃತ್ಯಗಳ ಮುಂದುವರಿಕೆಯಲ್ಲಿ, ಅವರು ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 201ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಹೇಳಲಾಗಿರುತ್ತದೆ. ಆಪಾದಿತ ವ್ಯಕ್ತಿಗಳು ಪರವಾನಗಿಯಿಲ್ಲದ ಆಯುಧಗಳನ್ನು

ಹೊಂದಿದ್ದು, ಆ ಮೂಲಕ ಅದನ್ನು ಆಯುಧಗಳ ಅಧಿನಿಯಮದ 3 ಹಾಗೂ 27ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧವೆಂದು ಅನ್ವಯಿಸಲಾಗಿರುತ್ತದೆ. ಮುಂದುವರೆದು, ಆಪಾದಿತ ಅಪೀಲುದಾರನೂ ಸೇರಿದಂತೆ ಆಪಾದಿತ ವ್ಯಕ್ತಿಗಳ ಕೃತ್ಯಗಳು ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 120ಬಿ, 109, 150, 153ಎ, 302, 201ನೇ ಪ್ರಕರಣಗಳ ಅಡಿಯಲ್ಲಿ ಹಾಗೂ ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಹಾಗೂ 20ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಮಾನವಾಗಿರುತ್ತವೆ.

6. ಅಪೀಲುದಾರನು ಇತರ ಆಪಾದಿತ ವ್ಯಕ್ತಿಗಳೊಂದಿಗೆ ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದಡಿಯಲ್ಲಿ ಬಿಡುಗಡೆಯನ್ನು ಕೋರಿದ್ದ, ಅದನ್ನು ದಿನಾಂಕ: 2ನೇ ಜನವರಿ, 2018ರ ಆದೇಶದ ಮೇರೆಗೆ ನಿರಾಕರಿಸಲಾಗಿರುತ್ತದೆ ಮತ್ತು ಆಪಾದಿತ ಅಪೀಲುದಾರನನ್ನು ಒಳಗೊಂಡಂತೆ ಆಪಾದಿತ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಲಾಗಿರುತ್ತದೆ. ವಿಶೇಷ ಎನ್‌ಐಎ ನ್ಯಾಯಾಲಯವು, ದಿನಾಂಕ: 2ನೇ ಜನವರಿ, 2018ರ ತನ್ನ ಆದೇಶದಡಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದಡಿಯಲ್ಲಿ ಬಿಡುಗಡೆಯನ್ನು ಕೋರಿ ಸಲ್ಲಿಸಿದಂಥ ಅಪೀಲುದಾರನ ಅರ್ಜಿಯ ಕುರಿತು ನಿರ್ಧರಿಸುವ ಸಂದರ್ಭದಲ್ಲಿ, ಅಪೀಲುದಾರನು ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ)ದ ಬೆಂಗಳೂರು ವಿಭಾಗದ ಅಧ್ಯಕ್ಷನಾಗಿದ್ದು, ಇತರ 1 ರಿಂದ 4ನೇ ಆಪಾದಿತ ವ್ಯಕ್ತಿಗಳೂ ಸಹ ಪಿಎಫ್‌ಐಯ ಸದಸ್ಯರಾಗಿದ್ದಾರೆಂದು ಪ್ರತಿವಾದಿಗಳ ಪರ ನ್ಯಾಯವಾದಿಗಳು ಒಪ್ಪಿಕೊಂಡಿದ್ದಾರೆ ಎನ್ನುವುದನ್ನು ಗಮನಿಸಿರುತ್ತದೆ. ದಿನಾಂಕ: 16ನೇ ಅಕ್ಟೋಬರ್, 2016 (ಘಟನೆ ನಡೆದ ದಿನಾಂಕ)ರ ಮುನ್ನ ಹಾಗೂ ತರುವಾಯದಲ್ಲಿ 1 ರಿಂದ 5ನೇ ಆಪಾದಿತ ವ್ಯಕ್ತಿಗಳೊಳಗೆ ಪದೇ ಪದೇ ದೂರವಾಣಿ/ಮೊಬೈಲ್ ಫೋನ್ ಸಂಭಾಷಣೆ ನಡೆಯುತ್ತಿತ್ತು ಎಂದೂ ಸಹ ಪ್ರತಿವಾದಿಗಳ ಪರ ನ್ಯಾಯವಾದಿಗಳು ಒಪ್ಪಿಕೊಂಡಿದ್ದು, ಇದು, ವಿ.ಎನ್.ಐ.ಎ. ನ್ಯಾಯಾಲಯವು ದಾಖಲೆಯಾಗಿರುವ ಆರೋಪ ಪಟ್ಟಿಯಲ್ಲಿ ಮಂಡಿಸಿದ ವಸ್ತುವಿಷಯವು, ಆಪಾದಿತ ವ್ಯಕ್ತಿಗಳ ನಡುವೆ ರೂಪಿತವಾದ ಒಳಸಂಚಿನ ಆಪಾದಿತ ಅಪರಾಧವು

ಮೇಲ್ನೋಟಕ್ಕೆ ಮನವರಿಕೆಯಾಗುವಂಥ ಸಾಕಷ್ಟು ವಿಷಯಾದಾರಗಳನ್ನು ಒದಗಿಸಿಕೊಟ್ಟಿರುತ್ತವೆಂಬ ನಿರ್ಣಯಕ್ಕೆ ಬರಲು ಸಹಾಯಕಾರಿಯಾಗಿರುತ್ತದೆ. ಮುಂದುವರೆದು, ಆಪಾದಿತ ಅಪೀಲುದಾರನು ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಗತ್ಯ ಅಂಶಗಳನ್ನು ಸಮರ್ಥಿಸುವಲ್ಲಿ ವಿಫಲನಾಗಿದ್ದಾನೆ ಎಂದು ಅದು ಅಭಿಪ್ರಾಯಪಟ್ಟಿದ್ದು, ಈ ವಿಷಯವು ಆರೋಪವನ್ನು ರೂಪಿಸುವಲ್ಲಿ ಮುಂದುವರೆಯಲು ಅರ್ಹವಾಗಿದೆ ಎಂದು ಅಂತಿಮವಾಗಿ ತೀರ್ಪು ನೀಡಿರುತ್ತದೆ. ದಿನಾಂಕ: 22ನೇ ನವೆಂಬರ್ 2018ರ ತನ್ನ ಪ್ರಶ್ನಿತ ತೀರ್ಪಿನ ಮೇರೆಗೆ ವಿಫಲನಾದ ಅಪೀಲುದಾರನು ಸಲ್ಲಿಸಿದ ರಿಟ್ ಅರ್ಜಿಯ ವಜಾಗೊಳಿಸುವಿಕೆಯ ಕಾರಣದಿಂದ ಸದರಿ ಆದೇಶವನ್ನು ಉಚ್ಚ ನ್ಯಾಯಾಲಯವು ದೃಢೀಕರಿಸಿರುತ್ತದೆ.

7. ಪ್ರಶ್ನಿತ ತೀರ್ಪು ನ್ಯಾಯವೈಫಲ್ಯಕ್ಕೆ ಕಾರಣವಾಗಿದ್ದು, ಅದು ಮೊಕದ್ದಮೆಯ ವಾಸ್ತವಿಕ ಸನ್ನಿವೇಶಗಳ ದೋಷಪೂರಿತ ಅರ್ಥೈಸುವಿಕೆಯ ಆಧಾರದ ಮೇಲಿದೆ ಮತ್ತು ಉಚ್ಚ ನ್ಯಾಯಾಲಯವು ದಾಖಲೆಯಲ್ಲಿರುವ ಮೌಖಿಕ ಹಾಗೂ ಲಿಖಿತ ಸಾಕ್ಷ್ಯವನ್ನು ಸೂಕ್ತ ದೃಷ್ಟಿಕೋನದಿಂದ ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಹಾಗೂ ಇದು ಸಂಪೂರ್ಣ ವ್ಯವಹರಣೆಗಳನ್ನು ದೂಷಿತಗೊಳಿಸಿದ್ದು, ಸಂಪೂರ್ಣ ಅನ್ಯಾಯಕ್ಕೆ ಎಡೆಮಾಡಿರುತ್ತದೆ ಎಂದು ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಕು. ಕಾಮಿನಿ ಜೈಸ್ವಾಲ್ ಅವರು ನಿವೇದಿಸಿರುತ್ತಾರೆ.

8. ಮುಂದುವರೆದು, ಅಪೀಲುದಾರನ ವಿರುದ್ಧ ಸಾಕ್ಷ್ಯವನ್ನು ಒದಗಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆಯೆಂದು ದೋಷಾರೋಪಣ ಪಟ್ಟಿಯ ಉದ್ಧೃತ ಭಾಗವನ್ನು ಓದುವ ಮೂಲಕ ತಿಳಿದುಬರುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುತ್ತಾರೆ. ಸಿಡಬ್ಲ್ಯೂ 1 ರಿಂದ 53, 55 ರಿಂದ 76, 78 ರಿಂದ 86, 86 ರಿಂದ 92, 94 ರಿಂದ 96 ಹಾಗೂ 98 ರಿಂದ 112 ಇವರುಗಳು ಅಪೀಲುದಾರನ ವಿರುದ್ಧ ಏನನ್ನೂ ಹೇಳಿರುವುದಿಲ್ಲ ಮತ್ತು ಆತನ ವಿರುದ್ಧ ಪ್ರಕರಣವನ್ನು ರೂಪಿಸಲು ಪ್ರಾಸಿಕ್ಯೂಷನ್ ಅವಲಂಬಿಸಿರುವ ಇತರ ಸಾಕ್ಷಿಗಳೆಂದರೆ ಬ್ಯಾಂಕ್ ಖಾತೆಯ ವಿವರಗಳು ಹಾಗೂ

ದೂರವಾಣಿ ಕರೆಗಳ ವಿವರಗಳುಳ್ಳ ದಾಖಲೆಗಳಂತಹ ಕೆಲವು ಮಾಹಿತಿಯನ್ನು ಒದಗಿಸಿರುವ ಮಹಜರು ವ್ಯವಹರಣೆಗಳ ಸಾಕ್ಷಿಗಳಾಗಿದ್ದು, ಅವುಗಳು ಅಪೀಲುದಾರನ ವಿರುದ್ಧ ಅಪರಾಧಕ್ಕೆ ಈಡುಮಾಡುವಂಥ ಯಾವುದೇ ಸಾಕ್ಷ್ಯಗಳನ್ನು ಬಹಿರಂಗಪಡಿಸುತ್ತಿರುವುದಿಲ್ಲ ಎಂದೂ ಅವರು ನಿವೇದಿಸಿಕೊಂಡಿರುತ್ತಾರೆ.

9. ಅಪೀಲುದಾರನು ಭಯೋತ್ಪಾದಕ ಆಕ್ರಮಣವೆಂದು ಪರಿಭಾಷಿಸಲಾಗಿರುವ ಈ ಆಪಾದಿತ, ಹತ್ಯೆಯ ಹಿಂದಿನ ಮುಖ್ಯ ಒಳಸಂಚುಕೋರನಾಗಿದ್ದಾನೆ ಎಂದು ಬಹಿರಂಗಪಡಿಸಲು ಯಾವುದೇ ಸಮರ್ಥನೀಯವಾದ ಅಂಶವಿರುವುದಿಲ್ಲವಾದ್ದರಿಂದ ಮಾನ್ಯ ನ್ಯಾಯವಾದಿಗಳ ಪ್ರಕಾರ, ಅಪೀಲುದಾರನ ವಿರುದ್ಧದ ಆರೋಪವು ಆಧಾರರಹಿತ ಹಾಗೂ ಕೇವಲ ಸಂದೇಹದ ಮೇಲಿರುತ್ತದೆ. ಪ್ರಾಸಿಕ್ಯೂಷನ್ ಕತೆಯನ್ನು ಸಮರ್ಥಿಸುವುದಕ್ಕೆ ಅಥವಾ ಅಪೀಲುದಾರನಿಂದ ಅಪರಾಧಕ್ಕೀಡು ಮಾಡುವಂಥ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳದಿರುವುದರಿಂದ, ಆತನು ಆರ್‌ಎಸ್‌ಎ ಸದಸ್ಯರನ್ನು ಹತ್ಯೆಗೈಯಲು ಇತರ ಪಿಎಫ್‌ಐ ಸದಸ್ಯರೊಂದಿಗೆ ಸೇರಿ ಒಳಸಂಚು ರೂಪಿಸಿ, ಒಳಸಂಚು ಸಭೆಗಳನ್ನು ಆಯೋಜಿಸಿದ್ದು, ಆರ್‌ಎಸ್‌ಎಸ್‌ಗೆ ಸೇರಿದ ಒಂದು ವರ್ಗದ ಜನರಲ್ಲಿ ಭಯವನ್ನು ಹುಟ್ಟಿಸುವ ಯೋಜನೆಯನ್ನು ಹುಟ್ಟುಹಾಕಿರುತ್ತಾನೆ ಎಂಬ ಆಪಾದನೆಯು ಕಲ್ಪಿತ ಕಥೆಯಾಗಿದ್ದು, ಇದರಲ್ಲಿ ಯಾವುದೇ ಸಾರವಿರುವುದಿಲ್ಲ ಮತ್ತು ವಿವರಿಸಲಾದ ಸನ್ನಿವೇಶಗಳಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಅಪೀಲುದಾರನು ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದಡಿಯಲ್ಲಿ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುವುದು ಹಾಗೂ ಉಚ್ಚ ನ್ಯಾಯಾಲಯವು ಅದನ್ನು ಎತ್ತಿಹಿಡಿದಿರುವುದು ಕಾನೂನಿನ ಅನುಸಾರ ಸಮರ್ಥನೀಯವಾಗಿರುವುದಿಲ್ಲ.

10. ಮುಂದುವರೆದು, ಪ್ರಾಸಿಕ್ಯೂಷನ್ ಪ್ರಕಾರ ಆಪಾದಿತ ಘಟನೆಯನ್ನು ವಿಜಯದಶಮಿಯಾಗಿರುವ ನವರಾತ್ರಿಯ ಕೊನೆಯ ದಿನದಂದು ಯೋಜಿಸಿ ಜಾರಿಗೊಳಿಸಲಾಗಿದೆ ಎಂದಿದ್ದರೂ ಸಹ, ನವರಾತ್ರಿಯು ಸದರಿ ದಿನಾಂಕದಂದು ಅದಾಗಲೇ ಗತಿಸಿಹೋಗಿತ್ತು ಹಾಗೂ

ವಿಜಯದಶಮಿಯು 11ನೇ ಅಕ್ಟೋಬರ್, 2016ರಂದು ಇದ್ದಿತು ಹಾಗೂ ಆಪಾದಿತ ಘಟನೆಯು ದಿನಾಂಕ: 16ನೇ ಅಕ್ಟೋಬರ್, 2016ರಂದು ನಡೆದಿರುತ್ತದೆ ಎಂಬುದು ದಾಖಲೆಯ ವಿಷಯವಾಗಿರುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿರುತ್ತಾರೆ. ಇಂತಹ ಹೇಳಿಕೆಯನ್ನು ಅಪೀಲುದಾರನ ವಿರುದ್ಧ ಆರೋಪವನ್ನು ರೂಪಿಸುವ ನಿಟ್ಟಿನಲ್ಲಿ ನ್ಯಾಯಾಲಯದ ಚಿಂತನೆಯನ್ನು ಪೂರ್ವಾಗ್ರಹಕ್ಕೆ ಒಳಪಡಿಸುವ ಸಲುವಾಗಿ ಮಾತ್ರವೇ ನೀಡಲಾಗಿದ್ದು, ಇದು ತರ್ಕಬದ್ಧವಾಗಿರುವುದಿಲ್ಲ ಹಾಗೂ ಸಮರ್ಥನೀಯವಾಗಿರುವುದಿಲ್ಲ ಹಾಗೂ ತನ್ನ ಪ್ರಶ್ನಿತ ತೀರ್ಪಿನಲ್ಲಿ ಉಚ್ಚ ನ್ಯಾಯಾಲಯವು ಇದನ್ನು ಪರಿಶೀಲಿಸಿ, ಪುರಸ್ಕರಿಸಿರುವುದಿಲ್ಲವೆಂದೂ ಸಹಾ ನಿವೇದಿಸಿರುತ್ತಾರೆ.

11. ಈ ಮೊಕದ್ದಮೆಯ ಯಾವುದೇ ಆಪಾದಿತರೂ ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ ಅನುಸೂಚಿಯ ಅಡಿಯಲ್ಲಿ ಪ್ರತಿಷೇಧಿಸಿರುವಂಥ, ಯಾವುದೇ ಭಯೋತ್ಪಾದಕ ಸಂಘಟನೆಗಳ ಸದಸ್ಯರಾಗಿಲ್ಲ, ಆದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿದ ತರುವಾಯ, ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮವನ್ನು ಅನ್ವಯಿಸಿಕೊಳ್ಳುವ ಪ್ರಶ್ನೆಯು ಇಲ್ಲಿ ಅನ್ವಯವಾಗಿರುವುದಿಲ್ಲ ಮತ್ತು ಕನಿಷ್ಠ ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ಆತನ ವಿರುದ್ಧ ರೂಪಿಸಿರುವ ಆರೋಪವು ಕಾನೂನಿನಲ್ಲಿ, ಕಾನೂನಾತ್ಮಕವಾಗಿ ಸಮರ್ಥನೀಯವಾಗಿರುವುದಿಲ್ಲ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿರುತ್ತಾರೆ.

12. ಇದಕ್ಕೆ ವಿರುದ್ಧವಾಗಿ, ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 15ನೇ ಪ್ರಕರಣವು, ಒಬ್ಬ ವ್ಯಕ್ತಿಯ ಹಾಗೂ ಒಂದು ಭಯೋತ್ಪಾದಕ ಗುಂಪು/ಸಂಘಟನೆಯ ಎರಡರ ಕೃತ್ಯವನ್ನೂ ಒಳಗೊಳ್ಳುತ್ತದೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 20ನೇ ಪ್ರಕರಣದ ಅನ್ವಯ, ಒಂದು ಸಂಘ/ಸಂಘಟನೆಯು ನಡೆಸಿರುವ ಭಯೋತ್ಪಾದಕ ಕೃತ್ಯಕ್ಕಾಗಿ

ಅದನ್ನು ದಂಡನೆಗೆ ಒಳಪಡಿಸುವುದಕ್ಕೆ ಅದು ಅನುಸೂಚಿಯಲ್ಲಿ ಸೇರ್ಪಡೆಯಾಗಿರುವ ಅಗತ್ಯವಿರುವುದಿಲ್ಲ ಎಂಬುದಾಗಿ ಪ್ರತ್ಯರ್ಜಿದಾರರ ಪರ ಹಾಜರಾಗಿರುವ ಮಾನ್ಯ ಎಎಸ್‌ಜಿಯವರಾದ ಶ್ರೀ ಅಮನ್ ಲೇಖಿಯವರು ಎಂದಿನಂತೆ ಬಲವಾಗಿ ವಾದ ಮಂಡಿಸಿರುತ್ತಾರೆ.

13. ಮುಂದುವರೆದು, ಆರ್‌ಎಸ್‌ಎಸ್ ಕಾರ್ಯಕರ್ತರು ಒಂದು ಪಥ ಸಂಚಲನವನ್ನು ಆಯೋಜಿಸಿದ್ದ ದಿನದಂದು ಸದರಿ ಘಟನೆಯು ಜರುಗಿದ್ದು, ಸಮವಸ್ತ್ರದಲ್ಲಿದ್ದ ಮೃತನ ಮೇಲೆ ಆಪಾದಿತ ವ್ಯಕ್ತಿಗಳು ಅಮಾನುಷವಾಗಿ ದಾಳಿ ಮಾಡಿ, ಆತನ ಕುತ್ತಿಗೆಯನ್ನು ಒಂದೇ ಏಟಿನಲ್ಲಿ ಸೀಳಿದ್ದು, ಅದರಿಂದಾಗಿ ಆತನು ಕೂಡಲೇ ಸಾವನ್ನಪ್ಪಿದ್ದಾನೆಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿರುತ್ತಾರೆ. ಒಪ್ಪಿಕೊಂಡಿರುವಂತೆ, ಅಪೀಲುದಾರ ಹಾಗೂ ಮೃತನ ನಡುವೆ ಯಾವುದೇ ದ್ವೇಷವಿರುವುದಿಲ್ಲ. ವಶಪಡಿಸಿಕೊಂಡ ವಸ್ತುಗಳೂ ಸೇರಿದಂತೆ ಕೃತ್ಯದ ಸ್ವರೂಪವು, ಕೃತ್ಯದ ಪರಿಣಾಮಗಳು ಭೌತಿಕ ಕೃತ್ಯಕ್ಕೆ ಅತೀತವಾಗಿರುವ ಉದ್ದೇಶದಿಂದ ಕೂಡಿದ್ದು ಸಮಷ್ಟಿಯಾಗಿ ಜನಸಾಮಾನ್ಯರ ಮನಸ್ಸುಗಳಲ್ಲಿ ಭಯವನ್ನು ಸೃಷ್ಟಿಸುವುದಕ್ಕಾಗಿ ಮತ್ತು ಅಭದ್ರತೆಯನ್ನು ಹುಟ್ಟಿಸುವುದಕ್ಕಾಗಿ ಮತ್ತು ಅಸೌಹಾರ್ದತೆಯನ್ನು ಉಂಟು ಮಾಡುವುದಕ್ಕಾಗಿ ಈ ಕೃತ್ಯವನ್ನು ಎಸಗಲಾಗಿದೆ ಎಂಬುದನ್ನು ತೋರಿಸುತ್ತದೆಯೆಂದೂ ಸಹಾ ನಿವೇದಿಸಿರುತ್ತಾರೆ.

14. ಮುಂದುವರೆದು, ಸಾಕ್ಷ್ಯದ ಸರಣಿಯು ಅಪರಾಧವನ್ನು ಎಸಗುವುದರಲ್ಲಿ ಅಪೀಲುದಾರನ ಒಳಗೊಳ್ಳುವಿಕೆಯನ್ನು ಬಹಿರಂಗಪಡಿಸುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿರುತ್ತಾರೆ:

i) ಅಪೀಲುದಾರನು ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ದ ಜಿಲ್ಲಾಧ್ಯಕ್ಷನಾಗಿದ್ದು, ಈ ಸಂಘಟನೆಯು ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಅನೇಕ ಆರ್‌ಎಸ್‌ಎಸ್ ಸದಸ್ಯರ/ಹಿಂದೂ ನಾಯಕರ ಹತ್ಯೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತದೆ.

ii) ಆಪಾದಿತ ಅಪೀಲುದಾರನೂ ಸೇರಿದಂತೆ ಎಲ್ಲಾ ಆಪಾದಿತರ ಹೆಸರುಗಳು ಹಾಗೂ ಭಾವಚಿತ್ರಗಳುಳ್ಳ ದಿನಾಂಕ: 12ನೇ ಡಿಸೆಂಬರ್, 2016ರ ಬ್ಯಾನರ್‌ನ ಜಪ್ತಿಗೊಳಿಸುವಿಕೆ.

iii) 1 ರಿಂದ 4ನೇ ಆಪಾದಿತರ ಹಾಗೂ ಆಪಾದಿತ ಅಪೀಲುದಾರನ ನಡುವೆ ನಡೆದಿರುವ ಹಲವು ದೂರವಾಣಿ ಕರೆಗಳ ವಿನಿಮಯಗಳು.

iv) 4ನೇ ಆಪಾದಿತ ಬರೆದಿರುವ ಪತ್ರವನ್ನು ಒಳಗೊಂಡ ಒಂದು ಲೆದರ್ ಪರ್ಸ್ ಅಪೀಲುದಾರನ ಕಾರ್ಯಾಲಯದಲ್ಲಿ ಪತ್ತೆಯಾಗಿದ್ದು, ಆ ಪತ್ರದಲ್ಲಿ, 4ನೇ ಆಪಾದಿತನು ಇತ್ತೀಚಿನ ಸಂದರ್ಭದಲ್ಲಿ ಪಿಎಫ್ಐಯು ಎಸಗಿರುವ 17 ಹತ್ಯೆಗಳನ್ನು ಪಟ್ಟಿ ಮಾಡಿದ್ದು, ಇತರ ಕೊಲೆಗಳಿಗೆ ಹೋಲಿಸಿದಾಗ ಮೃತ ರುದ್ರೇಶ್‌ನ ಕೊಲೆಯತ್ತ ಏಕೆ ಇಷ್ಟೊಂದು ಗಮನ ಹರಿಸಲಾಗಿದೆ? ಎಂಬ ಟಿಪ್ಪಣಿ ಕಂಡುಬಂದಿರುತ್ತದೆ ಎಂದು ಬಹಿರಂಗಪಡಿಸುವ 4ನೇ ನವೆಂಬರ್, 2016ರ ದಿನಾಂಕವುಳ್ಳ ಅನಾವರಣ ವರದಿ.

v) ಈ ಘಟನೆ ನಡೆಯುವ 8–9 ತಿಂಗಳುಗಳ ಹಿಂದೆ, ಆಪಾದಿತ ಅಪೀಲುದಾರ ಹಾಗೂ ಇತರ ಸದಸ್ಯರು ಆಯೋಜಿಸಿದ್ದಂಥ ಏಕಪಕ್ಷೀಯವಾದ ಸಿದ್ಧಾಂತವನ್ನು ಬೋಧಿಸುವ ತರಗತಿಗಳಿಗೆ ಎಲ್ಲಾ ಆಪಾದಿತರೂ ಹಾಜರಾಗಿದ್ದು, ಅಲ್ಲಿ ಅಪೀಲುದಾರನು ಆರ್‌ಎಸ್‌ಎಸ್ ಸದಸ್ಯರನ್ನು ಹತ್ಯೆಗೈಯಲು ಆಪಾದಿತ ವ್ಯಕ್ತಿಗಳನ್ನು ನೇಮಕಗೊಳಿಸಿ, ಅವರ ಅಭಿಪ್ರಾಯಗಳು ಬದಲಾಗುವಂತೆ ಸಮ್ಮೋಹನಗೊಳಿಸಿರುತ್ತಾನೆ ಎಂದು ತನಿಖೆಯು ಬಹಿರಂಗಪಡಿಸಿರುತ್ತದೆ.

vi) ಆಪಾದಿತ ಅಪೀಲುದಾರನು, ಆರ್‌ಎಸ್‌ಎಸ್ ಸದಸ್ಯರ ಹತ್ಯೆಯ ಹಿಂದಿನ ಸೂತ್ರದಾರನಾಗಿದ್ದನೆಂದು 4ನೇ ಆಪಾದಿತನು ತಪ್ಪೊಪ್ಪಿಕೊಂಡಿರುತ್ತಾನೆ.

15. ಮುಂದುವರೆದು, ಮಾನ್ಯ ನ್ಯಾಯವಾದಿಗಳು, ಅಪೀಲುದಾರನು ದಾಖಲೆಯಲ್ಲಿ ಮಂಡಿಸಿರುವ ದೋಷಾರೋಪಣ ಪಟ್ಟಿಯಿಂದ ಸ್ಪಷ್ಟವಾಗಿ ಕಂಡುಬಂದಿರುವಂಥ ಅಪರಾಧವೆಸಗಿದ್ದಾನೆಂದು ಆಲೋಚಿಸುವಂತೆ ಈ ನ್ಯಾಯಾಲಯವನ್ನು ದಿಕ್ಕುತಪ್ಪಿಸುವಂಥ ಬಲವಾದ ಸಂಶಯವಿದೆಯೆಂದೂ ಅಲ್ಲದೆ, ಅಧಿವಿಚಾರಣಾ ನ್ಯಾಯಾಲಯವು, ಮೇಲ್ನೋಟಕ್ಕೆ ಅಪೀಲುದಾರನ ವಿರುದ್ಧ ಮೊಕದ್ದಮೆಯನ್ನು ಹೂಡಲಾಗಿದೆಯೆಂದು ಯುಕ್ತವಾಗಿಯೇ ಅಭಿಪ್ರಾಯಪಟ್ಟಿದೆಯೆಂದೂ ಹಾಗೂ ಇದರ ದಿನಾಂಕ: 2ನೇ ಜನವರಿ, 2018ರ ಆದೇಶದ ಅಡಿಯಲ್ಲಿ ಇದು ಗಣನೆಗೆ ತೆಗೆದುಕೊಂಡ ವಾಸ್ತವಿಕ ಅಂಶಗಳನ್ನು ಪುನರವಲೋಕಿಸುವಲ್ಲಿ ಉಚ್ಚ ನ್ಯಾಯಾಲಯವು, ವಿಷಯವನ್ನು ವಿಸ್ತೃತವಾಗಿ ಪರಿಗಣಿಸಿದ ತರುವಾಯ, ಕನಿಷ್ಟ ಅಪೀಲುದಾರನು ಅಪೀಲನ್ನು ಸಲ್ಲಿಸುವ ಸಂದರ್ಭದಲ್ಲಿ ಯಾವುದೇ ಮಧ್ಯಪ್ರವೇಶಿಸುವಿಕೆಯನ್ನು ಮಾಡಬಾರದೆಂದು ನಿವೇದಿಸಿರುತ್ತಾರೆ.

16. ಪ್ರಸ್ತುತ ಮೊಕದ್ದಮೆಯ ಅಂಶಗಳನ್ನು ವಿಶ್ಲೇಷಿಸಲು ನಾವು ಮುಂದುವರಿಯುವುದಕ್ಕೂ ಮುನ್ನ, ಬಿಡುಗಡೆಯ ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಮಯದಲ್ಲಿ ನ್ಯಾಯಾಲಯದ ಅಧಿಕಾರ ಪರಿಧಿ ಮತ್ತು ವ್ಯಾಪ್ತಿಯನ್ನು ಗಮನಕ್ಕೆ ತೆಗೆದುಕೊಳ್ಳುವುದು ಸಮಂಜಸವಾಗಿರಬಹುದಾಗಿರುತ್ತದೆ. **ಯುನಿಯನ್ ಆಫ್ ಇಂಡಿಯಾ – ವಿರುದ್ಧ – ಪ್ರಫುಲ್ಲ ಕುಮಾರ್ ಸಮಲ್ ಮತ್ತು ಇತರರು** ಪ್ರಕರಣದಲ್ಲಿ ಈ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ವ್ಯಾಪ್ತಿಯನ್ನು ಪರಿಗಣಿಸುವ ಸಂದರ್ಭ ಒದಗಿಬಂದಿದ್ದು, ಈ ನ್ಯಾಯಾಲಯವು, 7ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "7. 227ನೇ ಪ್ರಕರಣದ ಸಂಹಿತೆಯು ಹೀಗಿರುತ್ತದೆ:
>
> "ಮೊಕದ್ದಮೆಯ ಅಭಿಲೇಖವನ್ನು ಮತ್ತು ಅದರೊಡನೆ ಒಪ್ಪಿಸಲಾದ ದಸ್ತಾವೇಜುಗಳನ್ನು ಪರ್ಯಾಲೋಚಿಸಿದ ಅನಂತರ ಮತ್ತು ಈ ಬಗ್ಗೆ ಆಪಾದಿತನ ಹಾಗೂ ಪ್ರಾಸಿಕ್ಯೂಟರನ ನಿವೇದನೆಗಳನ್ನು ಕೇಳಿದ ಆನಂತರ, ಆಪಾದಿತನ ವಿರುದ್ಧ ಮುಂದುವರಿಯಲು ಸಾಕಷ್ಟು ಕಾರಣವಿಲ್ಲವೆಂಬುದಾಗಿ

ನ್ಯಾಯಾಧೀಶರು ಪರ್ಯಾಲೋಚಿಸಿದರೆ ಅವರು ಆಪಾದಿತನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಹಾಗೆ ಮಾಡಲು ತನಗಿರುವ ಕಾರಣಗಳನ್ನು ಅಭಿಲೇಖಿಸತಕ್ಕದ್ದು.

'ಆಪಾದಿತನ ವಿರುದ್ಧ ಮುಂದುವರಿಯಲು ಸಾಕಷ್ಟು ಕಾರಣವಿಲ್ಲ ಎಂಬ' ಪದಾವಳಿಯು, ಪ್ರಾಸಿಕ್ಯೂಷನ್ನಿನ ಆಣತಿಯಂತೆ ಆರೋಪವನ್ನು ರೂಪಿಸಲು ನ್ಯಾಯಾಧೀಶರ ಪದವು ಕೇವಲ ಒಂದು ಅಂಚೆ ಕಚೇರಿಯಾಗಿರದೆ ಎಂಬುದನ್ನು ಸ್ಪಷ್ಟವಾಗಿ ತೋರ್ಪಡಿಸುತ್ತದೆ, ಪ್ರಾಸಿಕ್ಯೂಷನ್‌ನ್ನಿಂದ ಮೊಕದ್ದಮೆಯ ವಿಚಾರಣೆಯನ್ನು ನಡೆಸಲಾಗಿದೆಯೇ ಎಂಬುದನ್ನು ನಿರ್ಣಯಿಸುವ ಸಲುವಾಗಿ ಮೊಕದ್ದಮೆಯ ಸಂಗತಿಗಳಿಗೆ, ತನ್ನ ನ್ಯಾಯಿಕ ದೃಷ್ಟಿಕೋನವನ್ನು ಅನ್ವಯ ಮಾಡಬೇಕಿರುತ್ತದೆ. ಈ ವಾಸ್ತವಾಂಶವನ್ನು ನಿರ್ಣಯಿಸುವಲ್ಲಿ, ನ್ಯಾಯಾಲಯಕ್ಕೆ ವಾಸ್ತವವಾಗಿ ವಿಚಾರಣೆ ಪ್ರಾರಂಭವಾದ ತರುವಾಯದ ಕಾರ್ಯವಾಗಿರುವಂತಹ ವಿಷಯದ ಸಾಧಕಬಾಧಕಗಳತ್ತ ಅಥವಾ ಸಾಕ್ಷ್ಯ ಮತ್ತು ಸಂಭವನೀಯತೆಯನ್ನು ಅಳೆದು ತೂಗುವತ್ತ ಗಮನಹರಿಸುವ ಅಗತ್ಯವಿರುವುದಿಲ್ಲ. 227ನೇ ಪ್ರಕರಣದ ಸಂದರ್ಭದಲ್ಲಿ, ನ್ಯಾಯಾಧೀಶರು, ಕೇವಲ ಆಪಾದಿತನ ವಿರುದ್ಧ ಮುಂದುವರಿಯಲು ಸಾಕಷ್ಟು ಕಾರಣಗಳಿವೆಯೇ ಇಲ್ಲವೇ ಎಂಬುದನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಸಾಕ್ಷ್ಯದ ಪರಿಶೀಲನೆಯನ್ನು ಮಾಡಬೇಕಿರುತ್ತದೆ. ಆಧಾರದ ಪರ್ಯಾಪ್ತತೆಯು, ಪೊಲೀಸರ ಮೂಲಕ ದಾಖಲಿಸಲಾದ ಸಾಕ್ಷ್ಯದ ಅಥವಾ ಆಪಾದಿತರ ವಿರುದ್ಧ ಆರೋಪವನ್ನು ರೂಪಿಸಲು ಸಂಶಯಾಸ್ಪದ ಸಂದರ್ಭಗಳಿವೆಯೆಂದು ಸ್ಪಷ್ಟವಾಗಿ ಬಹಿರಂಗಪಡಿಸುವಂತಹ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವಂತಹ ದಸ್ತಾವೇಜುಗಳ ಸ್ವರೂಪವನ್ನು ತನ್ನ ಚೌಕಟ್ಟಿನೊಳಗೆ ತೆಗೆದುಕೊಳ್ಳುತ್ತದೆ.

17. ***ಸಜ್ಜನ್ ಕುಮಾರ್ – ವಿರುದ್ಧ ಸೆಂಟ್ರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್*** ಪ್ರಕರಣದಲ್ಲಿ ಈ ನ್ಯಾಯಾಲಯಕ್ಕೆ, ದಂಡ ಪ್ರಕ್ರಿಯಾ ಸಂಹಿತೆಯ 227 ಮತ್ತು 228ನೇ ಪ್ರಕರಣದ ವ್ಯಾಪ್ತಿಯನ್ನು

ಪರಿಗಣಿಸುವ ಸಂದರ್ಭವು ಒದಗಿಬಂದಿರುತ್ತದೆ. ಅದರಿಂದ ಉದ್ಭವಿಸಿದ ತತ್ವಗಳನ್ನು ಪ್ಯಾರಾ 21ರಲ್ಲಿ ಈ ಮುಂದಿನಂತೆ ಗಮನಿಸಲಾಗಿರುತ್ತದೆ:

"21. ಸಂಹಿತೆಯ 227 ಮತ್ತು 228ನೇ ಪ್ರಕರಣದ ವ್ಯಾಪ್ತಿಯ ಬಗ್ಗೆ ಪ್ರಾಧಿಕಾರಗಳನ್ನು ಪರಿಗಣಿಸುವಾಗ, ಈ ಮುಂದಿನ ತತ್ವಗಳು ಉದ್ಭವಿಸಿರುತ್ತದೆ:

*(i) ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಆರೋಪವನ್ನು ರೂಪಿಸುವ ಪ್ರಶ್ನೆಯನ್ನು ಪರಿಗಣಿಸುವಾಗ, ಮೇಲ್ನೋಟಕ್ಕೆ ಆಪಾದಿತನ ವಿರುದ್ಧ ಮೊಕದ್ದಮೆಯನ್ನು ಹೂಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯುವ ಸೀಮಿತ ಉದ್ದೇಶದಿಂದ ಸಾಕ್ಷ್ಯವನ್ನು ಪರಿಶೀಲಿಸಿ ನೋಡುವ ಅಧಿಕಾರವು ನ್ಯಾಯಾಧೀಶರಿಗೆ ನಿಸ್ಸಂದೇಹವಾಗಿರುತ್ತದೆ. ಮೇಲ್ನೋಟಕ್ಕೆ ಕಂಡುಬರುವ ಪ್ರಕರಣವನ್ನು ನಿರ್ಣಯಿಸುವ ಪರೀಕ್ಷೆಯು ಆಯಾ ಮೊಕದ್ದಮೆಯ ಸಂಗತಿಗಳ ಮೇಲೆ ಅವಲಂಬಿತವಾಗಿರುತ್ತದೆ.*

*(ii) ನ್ಯಾಯಾಲಯದ ಮುಂದೆ ಮಂಡಿಸಲಾದ ಸಾಕ್ಷ್ಯಗಳು, ಆಪಾದಿತನ ವಿರುದ್ಧ ಗಂಭೀರ ಸಂಶಯವನ್ನು ಬಹಿರಂಗಪಡಿಸಿದ್ದು, ಅವುಗಳನ್ನು ಸೂಕ್ತವಾಗಿ ವಿವರಿಸಿಲ್ಲವಾದಲ್ಲಿ, ಆರೋಪವನ್ನು ರೂಪಿಸುವಲ್ಲಿ ಮತ್ತು ವಿಚಾರಣೆಯನ್ನು ಮುಂದುವರೆಸುವಲ್ಲಿ ನ್ಯಾಯಾಲಯವು ಸಂಪೂರ್ಣವಾಗಿ ಸಮರ್ಥನೀಯವಾಗಿರುತ್ತದೆ.*

*(iii) ನ್ಯಾಯಾಲಯವು, ಕೇವಲ ಒಂದು ಅಂಚೆ ಕಚೇರಿಯಾಗಿ ಅಥವಾ ಪ್ರಾಸಿಕ್ಯೂಷನ್ನಿನ ಪರವಾಗಿ ಮಾತನಾಡುವ ಕಾರ್ಯವನ್ನು ನಿರ್ವಹಿಸಲಾಗದು. ಆದರೆ, ಮೊಕದ್ದಮೆಯ ಸಂಪೂರ್ಣ ಸಂಭವನೀಯತೆಗಳನ್ನು, ಸಾಕ್ಷ್ಯದ ಸಂಪೂರ್ಣ ಪರಿಣಾಮ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಸ್ತಾವೇಜುಗಳನ್ನು, ಇನ್ನಿತರೆ ಮೂಲಭೂತ ದೌರ್ಬಲ್ಯ, ಇತ್ಯಾದಿಗಳನ್ನು ನ್ಯಾಯಾಲಯವು ಪರಿಗಣಿಸತಕ್ಕದ್ದು. ಆದಾಗ್ಯೂ, ಈ ಹಂತದಲ್ಲಿ, ನ್ಯಾಯಾಧೀಶರು ವಿಚಾರಣೆ ನಡೆಸುತ್ತಿದ್ದಾರೆಂಬುದೆ, ವಿಷಯದ ಸಾಧಕ ಬಾಧಕಗಳ ಸುತ್ತ ತಿರುಗುವ ಮತ್ತು ಸಾಕ್ಷ್ಯದ ಪರಿಶೀಲನೆಯನ್ನು ಒಳಗೊಳ್ಳುವ ವಿಚಾರಣೆಯು ಸಾಧ್ಯವಿರುವುದಿಲ್ಲ.*

*(iv) ಆಪಾದಿತನು ಅಪರಾಧವನ್ನೆಸಗಿದ್ದಾನೆಂದು ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದ ಮೇಲೆ ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದರೆ, ನ್ಯಾಯಾಲಯವು ಆರೋಪವನ್ನು ರೂಪಿಸಬಹುದು. ಆದಾಗ್ಯೂ, ಆಪಾದಿತನು ಅಪರಾಧವನ್ನೆಸಗಿದ್ದಾನೆ ಎಂಬುದನ್ನು ಸಂದೇಹಾತೀತವಾಗಿ ರುಜುವಾತುಪಡಿಸುವ ತೀರ್ಮಾನವು ಅಪರಾಧ ನಿರ್ಣಯಕ್ಕೆ ಅಗತ್ಯವಾಗಿರುತ್ತದೆ.*

*(v) ಆರೋಪವನ್ನು ರೂಪಿಸುವ ಸಂದರ್ಭದಲ್ಲಿ ದಾಖಲೆಯಲ್ಲಿನ ಸಾಕ್ಷ್ಯಗಳ ಪ್ರಮಾಣತ್ಮಕ ಮೌಲ್ಯವು ಅನ್ವಯಿಸುವುದಿಲ್ಲ. ಆದರೆ, ಆರೋಪವನ್ನು ರೂಪಿಸುವ ಮೊದಲು, ದಾಖಲೆಯಲ್ಲಿ ಮಂಡಿಸಲಾದ ಸಾಕ್ಷ್ಯಗಳ ಮೇಲೆ ನ್ಯಾಯಾಲಯವು ತಮ್ಮ ನ್ಯಾಯಿಕ ದೃಷ್ಟಿಕೋನವನ್ನು ಅನ್ವಯಿಸಿಕೊಳ್ಳತಕ್ಕದ್ದು ಮತ್ತು ಆಪಾದಿತನು ಅಪರಾಧವೆಸಗುವ ಸಾಧ್ಯತೆಯಿದೆ ಎಂಬುದನ್ನು ಸಮ್ಮತ ಮಾಡಿಕೊಳ್ಳತಕ್ಕದ್ದು.*

*(vi) 227 ಹಾಗೂ 228ನೇ ಪ್ರಕರಣಗಳ ಹಂತದಲ್ಲಿ, ಒಂದುವೇಳೆ ದಾಖಲೆಯಲ್ಲಿ ಮಂಡಿಸಲಾದ ಸಾಕ್ಷ್ಯ ಮತ್ತು ದಸ್ತಾವೇಜುಗಳ ಮೇಲ್ನೋಟಕ್ಕೆ ಕಾಣಿಸುವ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಾಗ ಉದ್ಭವಿಸುವ ವಾಸ್ತವಾಂಶಗಳು ಆಪಾದಿತ ಅಪರಾಧವನ್ನು ರೂಪಿಸುವ ಎಲ್ಲಾ ಅಂಶಗಳ ಅಸ್ತಿತ್ವವನ್ನು ಬಹಿರಂಗಪಡಿಸುತ್ತವೆಯೇ ಎಂಬುದನ್ನು ಕಂಡು ಹಿಡಿಯುವ ದೃಷ್ಟಿಯಿಂದ ನ್ಯಾಯಾಲಯವು ಅವುಗಳನ್ನು ಮೌಲ್ಯಮಾಪನ ಮಾಡುವುದು ಅಗತ್ಯವಾಗಿರುತ್ತದೆ. ಈ ಪರಿಮಿತ ಉದ್ದೇಶಕ್ಕಾಗಿ, ಪ್ರಾಸಿಕ್ಯೂಷನ್ ಹೇಳುವ ಎಲ್ಲಾ ವಿಚಾರಗಳನ್ನು, ಅದು ಸಾಮಾನ್ಯ ತಿಳುವಳಿಕೆಗೆ ಅಥವಾ ಮೊಕದ್ದಮೆಯ ವಿಸ್ತಾರವಾದ ಸಂಭವನೀಯತೆಗಳಿಗೆ ವಿರುದ್ಧವಾಗಿದ್ದರೂ ಸಹ ಪರಮ ಸತ್ಯವೆಂದು ಅಂಗೀಕರಿಸುವುದನ್ನು ಅಂತಹ ಪ್ರಾರಂಭಿಕ ಹಂತದಲ್ಲಿಯೂ ನಿರೀಕ್ಷಿಸಲು ಸಾಧ್ಯವಿಲ್ಲದಿರುವುದರಿಂದ ಸಾಕ್ಷ್ಯವನ್ನು ಪರಿಶೀಲಿಸಬೇಕಾಗಿರುತ್ತದೆ.*

*(vii) ಒಂದೊಮ್ಮೆ ಎರಡು ಅಭಿಪ್ರಾಯಗಳ ಸಾಧ್ಯತೆಯಿದ್ದು, ಅವುಗಳಲ್ಲಿ ಒಂದು ಅಭಿಪ್ರಾಯವು, ಗಂಭೀರ ಸಂದೇಹದಿಂದ ವಿಭಿನ್ನವಾಗಿರುವ, ಕೇವಲ*

*ಸಂದೇಹಕ್ಕೆ ಎಡೆಮಾಡುತ್ತಿದ್ದಲ್ಲಿ, ಅಧಿವಿಚಾರಣಾ ನ್ಯಾಯಾಧೀಶರು ಆಪಾದಿತರನ್ನು ಬಿಡುಗಡೆಗೊಳಿಸುವುದಕ್ಕೆ ಅಧಿಕಾರ ಹೊಂದಿರುತ್ತಾರೆ ಮತ್ತು ಈ ಹಂತದಲ್ಲಿ, ವಿಚಾರಣೆಯು ಆರೋಪದಲ್ಲಿ ಅಥವಾ ಖುಲಾಸೆಯಲ್ಲಿ ಅಂತ್ಯಗೊಳ್ಳುತ್ತದೆಯೇ ಎಂಬುದನ್ನು ಅವರು ಗಮನಿಸ ಬೇಕಾಗಿರುವುದಿಲ್ಲ."*

18. ಮುಂದುವರಿದು, ಈ ನ್ಯಾಯಾಲಯವು, ***ರಾಜ್ಯ – ವಿರುದ್ಧ – ಎಸ್. ಸೆಲ್ವಿ ಮತ್ತು ಇತರರು ಮತ್ತು ವಿಕ್ರಮ್ ಜೊಹಾರ್ – ವಿರುದ್ಧ – ಉತ್ತರ ಪ್ರದೇಶ ರಾಜ್ಯ ಮತ್ತು ಇತರರು*** ಪ್ರಕರಣದಲ್ಲಿ, ಈ ವಿಷಯದ ಮೇಲಿನ ಕಾನೂನಿನ ವಿವರಣೆಯನ್ನು ಪರಿಗಣಿಸುತ್ತದೆ.

19. ನ್ಯಾಯಾಧೀಶರಿಗೆ, ಸೆಷನ್ಸ್ ಪ್ರಕರಣದಲ್ಲಿ (ವಾರೆಂಟು ಪ್ರಕರಣಗಳಿಗೆ ಸಂಬಂಧಿಸಿದಂತ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣಕ್ಕೆ ಸಂಬಂಧಿಸಿದಂತೆ) ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಆರೋಪವನ್ನು ರೂಪಿಸುವ ಪ್ರಶ್ನೆಯನ್ನು ಪರಿಗಣಿಸುವಾಗ, ಮೇಲ್ನೋಟಕ್ಕೆ ಆಪಾದಿತನ ವಿರುದ್ಧ ಪ್ರಕರಣವನ್ನು ಹೂಡಲಾಗಿದೆಯೇ ಎಂಬುದನ್ನು ಕಂಡುಕೊಳ್ಳುವ ಸೀಮಿತ ಉದ್ದೇಶದಿಂದ ಸಾಕ್ಷ್ಯವನ್ನು ಪರಿಶೀಲಿಸುವ ಅಧಿಕಾರವು ನಿಸ್ಸಂದೇಹವಾಗಿರುತ್ತದೆಂದೂ; ನ್ಯಾಯಾಲಯದ ಮುಂದೆ ಮಂಡಿಸಲಾದ ಸಾಕ್ಷ್ಯಗಳು ಆಪಾದಿತನ ವಿರುದ್ಧ ಬಲವಾದ ಸಂಶಯವನ್ನು ಸ್ಪಷ್ಟವಾಗಿ ಬಹಿರಂಗಪಡಿಸಿದ್ದು ಅವುಗಳನ್ನು ಯುಕ್ತವಾಗಿ ವಿವರಿಸಿರುವುದಿಲ್ಲವೆಂದೂ, ಆರೋಪವನ್ನು ರೂಪಿಸುವಲ್ಲಿ ನ್ಯಾಯಾಲಯವು ಸಂಪೂರ್ಣವಾಗಿ ಸಮರ್ಥವಾಗಿರುತ್ತದೆಂದೂ, ಒಟ್ಟಾರೆ ಎರಡೂ ಅಭಿಪ್ರಾಯಗಳಿಗೆ ಸಾಧ್ಯತೆಗಳಿದ್ದು, ಅದರಲ್ಲಿ, ಆಪಾದಿತನ ವಿರುದ್ಧ ಬಲವಾದ ಸಂಶಯವನ್ನು ಪ್ರತ್ಯೇಕಿಸಿದಂತೆ, ಒಂದು ಅಭಿಪ್ರಾಯದಿಂದ ಮಾತ್ರ ಸಂಶಯವು ಉದ್ಭವಿಸಿದ್ದರೆ, ಅಧಿವಿಚಾರಣಾ ನ್ಯಾಯಾಧೀಶರು ಆಪಾದಿತನನ್ನು ಬಿಡುಗಡೆಗೊಳಿಸುವಲ್ಲಿ ಸಮರ್ಥನೀಯರಾಗಿರುತ್ತಾರೆಂಬುದು, ಈ ನ್ಯಾಯಾಲಯವು, ವಿಷಯದ ಮೇಲೆ ಮಂಡಿಸಿದಂತಹ ಕಾನೂನಿನ ವಿವರಣೆಯನ್ನು ಗಮನಿಸಿದಾಗ ಸುಸ್ಥಾಪಿತವಾದುದಾಗಿರುತ್ತದೆ. ಆದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಬಿಡುಗಡೆಯ ಅರ್ಜಿಯನ್ನು

ಪರಿಶೀಲಿಸುವಾಗ, ಅಧಿವಿಚಾರಣಾ ನ್ಯಾಯಾಧೀಶರು, ವಿಚಾರಣೆಗೆ ಮೊಕದ್ದಮೆಯನ್ನು ಹೂಡಲಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಣಯಿಸಲು ತಮ್ಮ ನ್ಯಾಯಿಕ ದೃಷ್ಟಿಕೋನವನ್ನು ಅನ್ವಯ ಮಾಡುವುದನ್ನು ನಿರೀಕ್ಷಿಸಲಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅಂತಹ ವ್ಯವಹರಣೆಗಳಲ್ಲಿ, ದಾಖಲೆಯಲ್ಲಿನ ಸಾಕ್ಷ್ಯವನ್ನು ಕ್ರಮನಿರ್ಣಯಿಸುವ ಮೂಲಕ, ನ್ಯಾಯಾಲಯವು ಲಘು ವಿಚಾರಣೆಯನ್ನು ನಡೆಸುವಂತಿಲ್ಲ.

20. ಪ್ರಸ್ತುತ ಮೊಕದ್ದಮೆಯ ಅಂಶಗಳನ್ನು ನಾವು ಪ್ರಸ್ತಾಪಿಸುವುದಾದರೆ, ಆರಂಭದಲ್ಲಿ, ಭಾರತ ದಂಡ ಸಂಹಿತೆಯ 302, 34ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗುವ ಅಪರಾಧಗಳಿಗೆ ಸಂಬಂಧಿಸಿದಂತೆ, ದಿನಾಂಕ: 16ನೇ ಅಕ್ಟೋಬರ್ 2016ರಂದು ಅಪರಾಧ ಸಂಖ್ಯೆ: 124/2016ರಲ್ಲಿ ಕಮರ್ಷಿಯಲ್ ಸ್ಟ್ರೀಟ್ ಪೊಲೀಸರಿಂದ ರುದ್ರೇಶ ಎಂಬುವನ ಕೊಲೆಗೆ ಸಂಬಂಧಿಸಿದಂತೆ ಒಂದು ಕ್ರಿಮಿನಲ್ ಪ್ರಕರಣವು ದಾಖಲಾಗಿರುತ್ತದೆ ಮತ್ತು ಮೊದಲಿಗೆ, ಈ ಅಪರಾಧಕ್ಕೆ ಸಂಬಂಧಿಸಿದಂತೆ ನಾಲ್ಕು ಆಪಾದಿತ ವ್ಯಕ್ತಿಗಳನ್ನು ಬಂಧಿಸಲಾಗಿರುತ್ತದೆ. ತರುವಾಯ, ರಾಷ್ಟ್ರೀಯ ತನಿಖಾ ಏಜೆನ್ಸಿಯು, ಆಪಾದಿತರ ಪಟ್ಟಿಯಲ್ಲಿ ಅಪೀಲುದಾರನಾದ **ಅಸಿಮ್ ಶರೀಫ್‌ನ** (ಆಪಾದಿತ ಸಂಖ್ಯೆ: 5) ಹೆಸರನ್ನು ಒಳಗೊಂಡಂತೆ ಆರ್‌ಸಿ ಸಂಖ್ಯೆ: 24/2016ರಲ್ಲಿ ಪ್ರಥಮ ವರದಿಯನ್ನು ದಾಖಲು ಮಾಡಿಕೊಂಡಿರುತ್ತದೆ. ರಾಷ್ಟ್ರೀಯ ತನಿಖಾ ಅಧಿನಿಯಮದ 8ನೇ ಪ್ರಕರಣದೊಂದಿಗೆ ಓದಲಾದ 6(5)ನೇ ಪ್ರಕರಣದ ಮೇರೆಗೆ, ಯೂನಿಯನ್ ಆಫ್ ಇಂಡಿಯಾ, ಗೃಹ ಸಚಿವಾಲಯ (ಆಂತರಿಕ ಭದ್ರತೆ– 1ನೇ ವಿಭಾಗ) ಉತ್ತರ ಬ್ಲಾಕ್, ನವ ದೆಹಲಿ, ಅದರ ದಿನಾಂಕ: 7ನೇ ಡಿಸೆಂಬರ್, 2016ರ ಆದೇಶದ ಮೂಲಕ, ರಾಷ್ಟ್ರೀಯ ತನಿಖಾ ಏಜೆನ್ಸಿಗೆ ವಿಚಾರಣೆಯ ಹೊಣೆಯನ್ನು ಒಪ್ಪಿಸಿರುತ್ತದೆ. ಸದರಿ ಆದೇಶವನ್ನು ಪಾಲಿಸಿ, ರಾಷ್ಟ್ರೀಯ ತನಿಖಾ ಏಜೆನ್ಸಿ, ಹೈದರಾಬಾದ್ ಶಾಖೆಯು, ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 15, 16, 17, 18 ಮತ್ತು 20ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಆಯುಧ ಅಧಿನಿಯಮದ 3 ಮತ್ತು 27ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ 34ನೇ

ಪ್ರಕರಣದೊಂದಿಗೆ ಓದಲಾದ 120ಬಿ, 109, 150, 153ಎ, 302, 201ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾಗುವ ಅಪರಾಧಗಳಿಗೆ ಸಂಬಂಧಿಸಿದಂತೆ ಆರ್.ಸಿ.04/16–ಎನ್‌ಐಎ–ಎಚ್‌ವೈಡಿ ಎಂಬ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತದೆ.

21. ವಿಚಾರಣೆಯು ಪೂರ್ಣಗೊಂಡ ತರುವಾಯ, ದಿನಾಂಕ:5ನೇ ಏಪ್ರಿಲ್ 2017ರಂದು, ಆಪಾದಿತ ವ್ಯಕ್ತಿಗಳಾದ 1 ರಿಂದ 5ರ ವಿರುದ್ಧ ಅಂತಿಮ ವರದಿಯನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿರುತ್ತದೆ. ಈ ಹಂತದಲ್ಲಿ, ಆಪಾದಿತ ಅಪೀಲುದಾರನು, ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ, ಸದರಿ ಅಪರಾಧಗಳ ಆರೋಪದಿಂದ ಮುಕ್ತಗೊಳಿಸಲು ಸಲ್ಲಿಸಲಾಗಿದ್ದ ಬಿಡುಗಡೆಯ ಅರ್ಜಿಯು, ಅಧಿವಿಚಾರಣಾ ನ್ಯಾಯಾಲಯದಿಂದ, ಅದರ 12ನೇ ಜನವರಿ, 2018ರ ಆದೇಶದ ಅಡಿಯಲ್ಲಿ, ಬಲವಾದ ಕಾರಣಗಳನ್ನು ಮತ್ತು ಆತನ ಮತ್ತು ಇತರೆ ಆಪಾದಿತ ವ್ಯಕ್ತಿಗಳ (ಆಪಾದಿತ ಸಂಖ್ಯೆ: 1 ರಿಂದ 4) ವಿರುದ್ಧ ಆರೋಪವನ್ನು ರೂಪಿಸುವ ಆದೇಶವನ್ನು ದಾಖಲಿಸಿದ ತರುವಾಯ, ವಜಾಗೊಂಡಿರುತ್ತದೆ. ಆದೇಶದ ಉದ್ಧೃತ ಭಾಗವು ಈ ಮುಂದಿನಂತಿರುತ್ತದೆ:

> "22. ಆಪಾದಿತ ಅಪರಾಧಗಳ ಬಗ್ಗೆ ಈ ನ್ಯಾಯಾಲಯಕ್ಕೆ ಈಗಾಗಲೇ ತಿಳಿದಿರುತ್ತದೆ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಅನಗತ್ಯವಾಗಿರುತ್ತದೆ ಮತ್ತು ಮಂಜೂರಾತಿಯನ್ನು ಪಡೆದುಕೊಳ್ಳುವುದು, ಆಪಾದಿತ ಅಪರಾಧಗಳ ಸಂಜ್ಞಾನದ ದಿನಾಂಕದಲ್ಲಿದ್ದಂತೆ ಪೂರ್ವನಿರ್ದೇಶನದ ಷರತ್ತಾಗಿರುತ್ತದೆ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಅನಗತ್ಯವಾಗಿರುತ್ತದೆ. ಆಪಾದಿತ ಅಪರಾಧಗಳ ಸಂಜ್ಞಾನದ ಸಮಯದಲ್ಲಿ ರಾಷ್ಟ್ರೀಯ ತನಿಖಾ ಏಜೆನ್ಸಿಯು ಮಂಜೂರಾತಿಯನ್ನು ಪಡೆದುಕೊಂಡಿರುವುದರಿಂದ ಮತ್ತು ಈ ನ್ಯಾಯಾಲಯವು ಈಗಾಗಲೇ ಸಂಜ್ಞಾನವನ್ನು ಪಡೆದುಕೊಂಡಿರುವುದರಿಂದ, ನೈಜತೆಗೆ ಸಂಬಂಧಿಸಿದಂತೆ ಅಥವಾ ಮಂಜೂರಾತಿಗೆ ಹೊರತಾಗಿ ಯಾವುದೇ ಆದೇಶಗಳನ್ನು ಹೊರಡಿಸುವುದು ಅಪೀಲು ಅಥವಾ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯ ದುರಾಕ್ರಮಣದ ಕೃತ್ಯಕ್ಕೆ ಸಮಾನವಾಗುತ್ತದೆ ಎಂಬ ಅತೀ ಸರಳ ಕಾರಣದಿಂದಾಗಿ ಮಂಜೂರಾತಿಗೆ

ಸಂಬಂಧಿಸಿದಂತೆ ಯಾವುದೇ ಆದೇಶಗಳನ್ನು ಹೊರಡಿಸುವುದು ಸಮಂಜಸವಾಗಿರುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಸಂಜ್ಞಾನವನ್ನು ಪಡೆದುಕೊಳ್ಳುವ ಆದೇಶವು ಇಂದಿಗೂ ಪೂರ್ಣ ಸ್ಥಿತಿಯಲ್ಲಿದೆ. ಆದ್ದರಿಂದ, ಈ ಪ್ಯಾರಾಗಳಲ್ಲಿ ಹಾಗೂ ಈ ಆದೇಶದ ಹಿಂದಿನ ಪ್ಯಾರಾಗಳಲ್ಲಿ ನಿಗದಿಪಡಿಸಿರುವ ಕಾರಣಗಳಿಗಾಗಿ ರಾಷ್ಟ್ರೀಯ ತನಿಖಾ ಏಜೆನ್ಸಿಯು, ತಾನು ಒದಗಿಸಿರುವ ಸಾಕ್ಷ್ಯಗಳು ಮೊಕದ್ದಮೆಯಲ್ಲಿ ಮುಂದುವರೆಯಲು ಪರ್ಯಾಪ್ತವಾಗಿದ್ದು, ಅವು ಆಪಾದಿತ ಅಪರಾಧಗಳ ಮೇಲ್ನೋಟದ ಪ್ರಕರಣದ ಅಸ್ತಿತ್ವದ ವಿಷಯಾಧಾರಿತ ಮನವರಿಕೆಯನ್ನು ಒದಗಿಸುತ್ತವೆ ಎಂಬುದು ಸುಸ್ಥಾಪಿತವಾದುದಾಗಿರುತ್ತದೆ. ಆದ್ದರಿಂದ, ವಿವಾದಾಂಶ ಸಂಖ್ಯೆ:2ರ ವಸ್ತುವಿಷಯವು ನಕಾರಾತ್ಮಕವಾಗಿ ಉತ್ತರಿಸಲು ಅರ್ಹವಾಗಿದ್ದು, ವಿವಾದಾಂಶ ಸಂಖ್ಯೆ:3ರ ವಸ್ತುವಿಷಯವು ಸಕಾರಾತ್ಮಕವಾಗಿ ಉತ್ತರಿಸಲು ಅರ್ಹವಾಗಿರುತ್ತದೆ ಮತ್ತು ವಿವಾದಾಂಶ ಸಂಖ್ಯೆ:4ರ ವಸ್ತುವಿಷಯವು ನಕಾರಾತ್ಮಕವಾಗಿ ಉತ್ತರಿಸಲು ಅರ್ಹವಾಗಿರುತ್ತದೆ ಮತ್ತು ತದನುಸಾರವಾಗಿ ಸದರಿ ವಿವಾದಾಂಶಗಳನ್ನು ಈ ಮೂಲಕ ಉತ್ತರಿಸಲಾಗಿರುತ್ತದೆ. ಈ ನ್ಯಾಯಾಲಯವು ಈ ಮುಂದಿನಂತೆ ಆದೇಶವನ್ನು ಹೊರಡಿಸಲು ಮುಂದುವರೆಯುತ್ತದೆ:

**ಆಜ್ಞೆ**

ಆಪಾದಿತ ಸಂಖ್ಯೆ:5, ದಂಡ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿರುತ್ತದೆ. ಪ್ರಸ್ತುತ ಮೊಕದ್ದಮೆಯು, ದೋಷಾರೋಪಣ ಪಟ್ಟಿಯಲ್ಲಿ ಎಲ್ಲಾ ಆಪಾದಿತ ವ್ಯಕ್ತಿಗಳ ವಿರುದ್ಧ ದಾಖಲಿಸಲಾದ ಅಪರಾಧಗಳನ್ನು ಉಲ್ಲೇಖಿಸಿರುವಂತೆ, ಆಪಾದಿತ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪವನ್ನು ರೂಪಿಸುವಲ್ಲಿ ಮುಂದುವರೆಯಲು ಅರ್ಹವಾಗಿರುತ್ತದೆ**”**.

22. ವಿಫಲನಾದ ಅಪೀಲುದಾರನು, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದೊಂದಿಗೆ ಓದಲಾದ ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದದ ಅಡಿಯಲ್ಲಿ,

ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಉಚ್ಚ ನ್ಯಾಯಾಲಯವು, ದಾಖಲೆಯಲ್ಲಿನ ಸಂಪೂರ್ಣ ಸಾಕ್ಷ್ಯಗಳನ್ನು ವಿಶ್ಲೇಷಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಸ್ಥಿರೀಕರಿಸಿದ್ದು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "ಪ್ರಸ್ತುತ ಅರ್ಜಿಯು ಭಾರತ ಸಂವಿಧಾನದಡಿಯಲ್ಲಿನ ರಿಟ್ ಅಧಿಕಾರ ವ್ಯಾಪ್ತಿಯನ್ನು ಮತ್ತು ಅರ್ಜಿಯ ಹಿಂದಿನ ಸುತ್ತಿನಲ್ಲಿ ಅರ್ಜಿದಾರನ ನಿಲುವನ್ನು ಈ ನ್ಯಾಯಾಲಯದ ಆದೇಶಗಳು ನಿರ್ದಿಷ್ಟವಾಗಿ ನಕಾರಾತ್ಮಕಗೊಳಿಸಿತ್ತು ಎಂಬ ವಾಸ್ತವಾಂಶಕ್ಕೆ ಸಂಬಂಧಿಸಿದಂತೆ, ಈ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳನ್ನು ಅನ್ವಯಿಸುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಈ ವಿಷಯವನ್ನು ವ್ಯವಹರಣೆಗಳಲ್ಲಿ ಮಂಡಿಸಿ, ನಿರ್ಧರಿಸಿ, ನ್ಯಾಯ ನಿರ್ಣಯ ಮಾಡಲಾಗಿರುತ್ತದೆ ಮತ್ತು ಅರ್ಜಿದಾರನು ಪುನಃ ಮುಂದಿನ ಸುತ್ತಿಗಾಗಿ ಬಂದಿರುತ್ತಾನೆ. ವಾಸ್ತವಾಂಶಗಳಲ್ಲಿ ಅಥವಾ ಕಾನೂನಿನಲ್ಲಿ, ಬೆಂಗಳೂರಿನ XLIX ಹೆಚ್ಚುವರಿ ನಗರ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಧೀಶರ (ಎನ್‌ಐಎ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ) ಕಡತದಲ್ಲಿ ಆಯುಧ ಅಧಿನಿಯಮದ 3 ಹಾಗೂ 27ನೇ ಪ್ರಕರಣಗಳ ಹಾಗೂ ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 201ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ 15, 16, 17, 18 ಹಾಗೂ 20ನೇ ಪ್ರಕರಣಗಳಡಿಯಲ್ಲಿನ ದಂಡನೀಯವಾದ ಅಪರಾಧಗಳಿಗಾಗಿ ಇತ್ಯರ್ಥದಲ್ಲಿರುವ ವಿಶೇಷ ಸಿ.ಸಿ. ಸಂಖ್ಯೆ:181/2017ರಲ್ಲಿನ ವ್ಯವಹರಣೆಗಳಲ್ಲಿ ತಪ್ಪಾಗಿರಬಹುದಾದ ಸಂಭವವನ್ನು ಸೂಚಿಸುವುದಕ್ಕೆ ಪ್ರಯೋಜನಕರವಾದ ಯಾವುದೇ ಸಾಕ್ಷ್ಯವಿರುವುದಿಲ್ಲ."

23. ಅಷ್ಟೇ ಅಲ್ಲದೇ, ಅವಗಾಹನೆಗಾಗಿ ನೀಡಿದ್ದ ದಾಖಲೆಯಲ್ಲಿ ಮಂಡಿಸಲಾದ ದೋಷಾರೋಪಣ ಪಟ್ಟಿಯ ಉದ್ಧೃತ ಭಾಗ ಮತ್ತು ಸುಸಂಬದ್ಧ ದಾಖಲೆಯನ್ನು ನಾವು ಪರಿಶೀಲಿಸಿದ್ದೇವೆ ಮತ್ತು ಈ ಅಂಶಗಳು, ಆಪಾದಿತ ಅಪೀಲುದಾರನು, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬೆಂಗಳೂರು ವಿಭಾಗದ ಅಧ್ಯಕ್ಷನಾಗಿರುತ್ತಾನೆ ಮತ್ತು ಇತರ 1 ರಿಂದ 4ನೇ ಆಪಾದಿತ ವ್ಯಕ್ತಿಗಳೂ ಸಹ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯರು ಆಗಿರುತ್ತಾರೆ ಎಂಬುದನ್ನು ಬಹಿರಂಗಪಡಿಸುತ್ತದೆ. ದಿನಾಂಕ: 16ನೇ ಅಕ್ಟೋಬರ್, 2016ರ (ಆಪಾದಿತ ಘಟನೆ ಸಂಭವಿಸಿದ ದಿನಾಂಕ) ಮುನ್ನ ಹಾಗೂ ತರುವಾಯದಲ್ಲಿ ಅಪೀಲುದಾರ (ಆಪಾದಿತ ಸಂಖ್ಯೆ:5) ಮತ್ತು ಇತರೆ ಆಪಾದಿತ ವ್ಯಕ್ತಿಗಳ (ಆಪಾದಿತ ಸಂಖ್ಯೆ 1 ರಿಂದ 4) ನಡುವೆ ಪದೇ ಪದೇ ದೂರವಾಣಿ ಮೊಬೈಲ್ ಫೋನ್ ಸಂಭಾಷಣೆಯು ನಡೆದಿರುತ್ತದೆ ಎಂಬುದನ್ನು ದೋಷಾರೋಪಣ ಪಟ್ಟಿಯು ಬಹಿರಂಗಪಡಿಸಿದ್ದು, ಆಪಾದಿತ ವ್ಯಕ್ತಿಗಳ ನಡುವೆ ಒಳಸಂಚಿನ ವಸ್ತುವಿಷಯವು ಮೇಲ್ನೋಟಕ್ಕೆ ಕಂಡುಬರುವಂತದಾಗಿದ್ದು, ಅದು ಆಪಾದಿತ ವ್ಯಕ್ತಿಗಳ ನಡುವೆ ರೂಪಿತವಾದ ಒಳಸಂಚಿನ ಆಪಾದಿತ ಅಪರಾಧಗಳು ಮೇಲ್ನೋಟಕ್ಕೆ ಮನವರಿಕೆಯಾಗುವಂಥ ಸಾಕಷ್ಟು ವಿಷಯಾಧಾರಗಳನ್ನು ಒದಗಿಸಿಕೊಟ್ಟಿರುತ್ತವೆ ಎಂಬ ನಿರ್ಣಯಕ್ಕೆ ಕಾರಣವಾಗಿರುತ್ತದೆ ಮತ್ತು ಅಂತಹ ಒಳಸಂಚಿನ ಸತ್ಯತೆ ಮತ್ತು ನಿಖರತೆಯನ್ನು ವಿಚಾರಣೆಯ ಸಂದರ್ಭದಲ್ಲಿ ಪರಿಶೀಲಿಸಬೇಕೆಂಬ ನಿರ್ಣಯಕ್ಕೆ ಬರುವಲ್ಲಿ ದೋಷಾರೋಪಣ ಪಟ್ಟಿಯಲ್ಲಿನ ಅಂಶಗಳು ನ್ಯಾಯಾಲಯದ ಮನವೊಲಿಸಿರುತ್ತದೆ.

24. ಪ್ರಸ್ತುತ ಸಂಗತಿ ಮತ್ತು ಸನ್ನಿವೇಶಗಳಲ್ಲಿ, ನಮ್ಮ ಮುಂದೆ ಹಾಜರುಪಡಿಸಲಾದ ದಾಖಲೆಗಳನ್ನು ಮತ್ತು ಪ್ರಶ್ನಿತ ತೀರ್ಪನ್ನು ಪರಿಶೀಲಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಉಚ್ಚ ನ್ಯಾಯಾಲಯವು, ದಿನಾಂಕ: 22 ನವೆಂಬರ್ 2018ರ ಪ್ರಶ್ನಿತ ತೀರ್ಪಿನಿಂದ ಸ್ಥಿರೀಕರಿಸಲಾದ ತೀರ್ಪು ನಮ್ಮ ಮಧ್ಯಪ್ರವೇಶಿಕೆಯನ್ನು ಕೋರಿದ್ದು, ಆ ತೀರ್ಪಿನಲ್ಲಿ ಯಾವುದೇ ದೋಷವಿರುವುದಿಲ್ಲವೆಂಬುದನ್ನು ನಾವು ಗಮನಿಸಿದ್ದೇವೆ.

25. ಈ ನ್ಯಾಯಾಲಯವು ಗಮನಿಸಿದಂತ ಅಂಶಗಳು, ಪ್ರಸ್ತುತ ಅಪೀಲನ್ನು ವಿಲೇ ಮಾಡುವ ಉದ್ದೇಶದಿಂದ ಮಾಡಿರುವಂಥವಾಗಿರುತ್ತವೆ. ನ್ಯಾಯಾಲಯವು ಗಮನಿಸಿದ ಇನ್ನಿತರ ಅಂಶಗಳೂ ವಿಚಾರಣೆಯ ಸಂದರ್ಭದಲ್ಲಿ ಪಕ್ಷಕಾರರ ಹಕ್ಕುಗಳನ್ನು ಪೂರ್ವಾಗ್ರಹ ಮಾಡತಕ್ಕದ್ದಲ್ಲವೆಂದು ಮತ್ತು ಅಧಿವಿಚಾರಣಾ ನ್ಯಾಯಾಲಯವೂ ಸಹ ನಾವು ಗಮನಿಸಿದ ಅಂಶಗಳಿಂದ ಪ್ರಭಾವಿತ/ಪ್ರತಿಬಿಂಬಿತರಾಗಬಾರದೆಂದು ಮತ್ತು ಕಾನೂನಿನ ಅನುಸಾರವಾಗಿ ಸ್ವತಂತ್ರವಾಗಿ ವಿಚಾರಣೆ ನಡೆಸಲು ಮುಂದುವರಿಯಬಹುದೆಂದು ಸ್ಪಷ್ಟಪಡಿಸಲು ನಾವು ಇಚ್ಛಿಸುತ್ತೇವೆ.

26. ಈ ಅಭಿಪ್ರಾಯೋಕ್ತಿಗಳೊಂದಿಗೆ, ಈ ಅಪೀಲನ್ನು ವಜಾಗೊಳಿಸಲಾಗಿರುತ್ತದೆ.

27. ಇತ್ಯರ್ಥದಲ್ಲಿರುವ ಅರ್ಜಿ (ಅರ್ಜಿಗಳು) ಯಾವುದಾದರೂ ಇದ್ದಲ್ಲಿ, ವಿಲೆಯಾಗಿರುತ್ತವೆಂದು ಭಾವಿಸತಕ್ಕದ್ದು.

................................... **ನ್ಯಾ.**
**(ಎ.ಎಂ. ಕಾನ್ವಿಲಕರ್)**

................................... **ನ್ಯಾ.**
**(ಅಜೆಯ್ ರಸ್ತೋಗಿ)**

**ನವ ದೆಹಲಿ**
**1ನೇ ಜುಲೈ, 2019.**

## ಕ್ಲೇಮು ನಿರಾಕರಣೆ

**“**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**”**